**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ**
**ಘನ ನ್ಯಾಯಾಲಯದಲ್ಲಿ**

**ಪ್ರಕರಣ ಸಂಖ್ಯೆಃ ಸ್ಪೆಷಲ್ ಕೇಸ್ *6/2014***

ದಿನಾಂಕಃ ***16.10.2023***
(ಸಾಕ್ಷಿಗೆ ಪ್ರಮಾಣ **ಮಾಡಿಸಲಾಯಿತು.**)

ಪ್ರಾ.ಸಾಃ *3* (ಚಾ.ಸಾ. *2*)

| | | |
|---|---|---|
| ಹೆಸರು | ಃ | **ಎಸ್.ಎಂ.** ಮಹದೇವಸ್ವಾಮಿ |
| ತಂದೆಯ ಹೆಸರು | ಃ | ಲೇಟ್ ಮಲ್ಲಯ್ಯ |
| ವಯಸ್ಸು | ಃ | *58* ವರ್ಷ |
| ಉದ್ಯೋಗ | ಃ | **ಸಾರ್ವಜನಿಕ** ಗ್ರಂಥಾಲಯ ಸಹಾಯಕ, ರಾಮನಗರ |
| ವಾಸ ಸ್ಥಳ | ಃ | **ರಾಮನಗರ ಟೌನ್** |

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಅಭಿಯೋಜಕರಿಂದಃ**

*2012* ರಂದು ಗ್ರಂಥಾಲಯ ಸಹಾಕರಾಗಿ ಮುಖ್ಯ ಗ್ರಂಥಾಲಯ ಅಧಿಕಾರಿಗಳ ಕಛೇರಿ ರಾಮನಗರದಲ್ಲಿ ಕೆಲಸ ಮಾಡುತ್ತಿದ್ದೆನು.

*2.* ವಜ್ರಮುನಿ ಎಂಬುವವರು ಮುಖ್ಯ ಗ್ರಂಥಾಲಯ ಅಧಿಕಾರಿ ಎಂದು ಕೆಲಸ ಮಾಡುತ್ತಿದ್ದರು.

*3.* ದಿಃ*22.11.2012* ರಂದು ಮಧ್ಯಾಹ್ನ *12.00* ಗಂಟೆಗೆ ಲೋಕಾಯುಕ್ತ ಕಛೇರಿಯಿಂದ ಅವರ ಸಿಬ್ಬಂದಿ ಬಂದು ನಮ್ಮ ಮುಖ್ಯ ಅಧಿಕಾರಿಗಳ ಹತ್ತಿರ ಮಾತನಾಡುತ್ತಿದ್ದರು. ಮಧ್ಯಾಹ್ನ *01.30* ಗಂಟೆಗೆ ನನ್ನ ಮೇಲಾಧಿಕಾರಿಗಳು ಲೋಕಾಯುಕ್ತರ ಒಂದು ಕೇಸಿನಲ್ಲಿ ಪಂಚರಾಗಿ ಸಹಕರಿಸುವಂತೆ ಹೇಳಿದರು. ನಾನು ಮಧ್ಯಾಹ್ನ *02.20* ಗಂಟೆಗೆ ಲೋಕಾಯಕ್ತ ಕಛೇರಿಗೆ ಹೋಗಿ ತನಿಖಾಧಿಕಾರಿಗಳನ್ನು ಭೇಟಿಯಾದೆನು.

*4.* ನಾನು ಅಲ್ಲಿಗೆ ಹೋದಾಗ ಮಂಜುನಾಥ್ ಎಂಬ ತಹಸೀಲ್ದಾರ್ ಕಛೇರಿಯಿಂದ ಬಂದಿದ್ದರು. ರಾಮದಾಸ್ ಎಂಬುವವರು ಕೂಡ ಬಂದಿದ್ದರು.

ತನಿಖಾಧಿಕಾರಿಗಳು ನನಗೆ ಪಿರ್ಯಾದಿಯನ್ನು ಮತ್ತು ಚಾಸಾ *3* ಮಂಜುನಾಥ್ ಇವರನ್ನು ಪರಿಚಯ ಮಾಡಿಕೊಟ್ಟರು.

*5.* ಡ್ರೈನೇಜ್ ಕೆಲಸ ಮಾಡಿದಕ್ಕೆ *1,00,000/-* ರೂ.ಯಲ್ಲಿ *65,000/-* ಕೊಟ್ಟಿದ್ದಾರೆ ಇನ್ನೂ ಉಳಿದ *28,000/-* ರೂ. ಚಿಲ್ಲರೆ ಬಾಕಿ ಇದ್ದು ಅದನ್ನು ಕೊಡುವುದಕ್ಕೆ ಬಸವಲಿಂಗಯ್ಯ ಎಂಬ ಕಾರ್ಯದರ್ಶಿಯವರು ಲಂಚ ಕೇಳುತ್ತಿದ್ದಾರೆ ಎಂದು ಪಿರ್ಯಾದಿ ತಿಳಿಸಿದರು.

*6.* ಸದರಿ ಸಂಭಾಷಣೆಯನ್ನು ತಮ್ಮ ಮೊಬೈಲ್ ನಲ್ಲಿ ಪಿರ್ಯಾದಿ ರಾಮದಾಸ್ ರೆಕಾರ್ಡ್ ಮಾಡಿಕೊಂಡು ಬಂದಿದ್ದರು. ಸದರಿ ಸಂಭಾಷಣೆಯನ್ನು ಮೊಬೈಲ್ ಆನ್ ಮಾಡಿ ತಮಗೆ ಕೇಳಿಸಿದರು. ಅದರಲ್ಲಿ *15%-16%* ಕೊಡು ಎಂದು ಲಂಚ ಬೇಡಿಕೆ ಇಟ್ಟಿದ್ದು ದಾಖಲಾಗಿತ್ತು. ಸಂಭಾಷಣೆ ಸ್ಪಷ್ಟವಾಗಿ ಕೇಳಿಸುತ್ತಿರಲಿಲ್ಲ.

*7.* ಪೊಲೀಸರು ಮೊಬೈಲ್ ನ್ನು ಪಿರ್ಯಾದಿಯಿಂದ ಪಡೆದುಕೊಂಡು, ನಂತರ ರಾಮದಾಸ್ ರವರಿಗೆ ಕೊಟ್ಟರು, ಕೇಳಿದಾಗ ಹಾಜರುಪಡಿಸುವಂತೆ ಹೇಳಿದರು.

*8.* ಚಾಸಾ *1* ರಾಮದಾಸ್ ರವರನ್ನು *1,000* ಮುಖಬೆಲೆಯ *10* ನೋಟುಗಳನ್ನು ತಂದಿದ್ದರು. ಅದನ್ನು ಲೋಕಾಯಕ್ತ ಅಧಿಕಾರಿಗಳು ಪಡೆದುಕೊಂಡು ನನ್ನ ಕೈಗೆ ಕೊಟ್ಟರು, ನಾನು ನೋಟುಗಳನ್ನು ಎಣಿಸಿದೆ. ನಾನು ಅವುಗಳ ನಂಬರ್ ಗಳನ್ನು ಮತ್ತು ಮೌಲ್ಯಗಳನ್ನು ಚಾಸಾ *3* ಮಂಜುನಾಥ್ ರವರಿಗೆ ಹೇಳಿದೆ ಅವರು ಒಂದು ಬಿಳಿ ಹಾಳೆಯ ಮೇಲೆ ಬರೆದುಕೊಂಡರು. ಸಾಕ್ಷಿ ಗುರುತಿಸಿದ ಸದರಿ ದಾಖಲೆಯನ್ನು ಈಗಾಗಲೇ ನಿಪಿ *2* ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ *2 (ಸಿ)* ಎಂದು ಗುರುತಿಸಲಾಯಿತು.

*9.* ಸಾಕ್ಷಿ ಗುರುತಿಸಿದ ಸದರಿ ನೋಟುಗಳನ್ನು ಈಗಾಗಲೇ ಮು.ಮಾ. *9* ಎಂದು ಗುರುತಿಸಲಾಗಿದೆ.

*10.* ತನಿಖಾಧಿಕಾರಿಗಳ ನಿರ್ದೇಶದ ಮೇರಗೆ ಅವರ ಸಿಬ್ಬಂದಿ ಸದರಿ ನೋಟುಗಳಿಗೆ ಪೆನಾಪ್ತಲಿನ್ ಪೌಡರ್ ಸವರಿದ್ದರು, ನಂತರ ಅವುಗಳನ್ನು ನನ್ನ ಕೈಗೆ

ಕೊಟ್ಟರು. ನಾನು ಅವುಗಳನ್ನು ಪುನಃ ಎಣಿಸಿ, ನಿಪಿ *2* ರೊಂದಿಗೆ ಹೋಲಿಕೆ ಮಾಡಿ ತಾಳೆ ಆಗುತ್ತದೆ ಎಂದು ಹೇಳಿದೆ.

*11.* ತನಿಖಾಧಿಕಾರಿಗಳ ಆದೇಶದ ಮೇರೆಗೆ ಪಂಚ-*2* ಮಂಜುನಾಥ್ ದೂರುದಾರರ ಶರ್ಟಿನ ಎಡಭಾಗದ ಜೇಬನ್ನು ಪರಿಶೀಲನೆ ಮಾಡಿ, ಅದರಲ್ಲಿ ಏನು ಇಲ್ಲ ಎಂದು ತಿಳಿಸಿದರು. ನಾನು ಸದರಿ ಹಣ ಮು.ಮಾ. *9* ನ್ನು ದೂರುದಾರರ ಜೇಬಿನಲ್ಲಿ ಹಾಕಿದೆ. ಸದರಿ ಹಣವನ್ನು ಬಸವಲಿಂಗಯ್ಯ ಕೇಳಿದರೆ ಮಾತ್ರ ಕೊಡವಂತೆ ಮತ್ತು ಆ ಹಣವನ್ನು ಬೇರೆ ಕಾರ್ಯಕ್ಕೆ ಉಪಯೋಗ ಮಾಡಬಾರದು ಎಂದು ಸೂಚಿಸಿದ್ದರು.

*12.* *2* ಖಾಲಿ ಬಟ್ಟಲುಗಳಲ್ಲಿ ಸೋಡಿಯಂ ಕಾರ್ಬೋನೇಟ್ ದ್ರಾವಣ ಹಾಕಿ ಅದರಲ್ಲಿ ಸ್ವಲ್ಪ ದ್ರಾವಣವನ್ನು ತೆಗೆದು ಬೇರೆ ಖಾಲಿ ಬಾಟಲಿಗೆ ಹಾಕಿ ಮುಚ್ಚಳ ಮುಚ್ಚಿ ಡಬ್ಲ್ಯೂಡಬ್ಲ್ಯೂ ಎಂಬ ಆಂಗ್ಲ ಅಕ್ಷರದಿಂದ ಸೀಲ್ ಮಾಡಿ ವಶಪಡಿಸಿಕೊಂಡರು. ಸದರಿ ಬಾಟಲಿಯನ್ನು ಈಗಾಗಲೇ ಮು.ಮಾ. *7* ಎಂದು ಗುರುತಿಸಲಾಗಿದೆ. ಸದರಿ ಬಾಟಲಿಯ ಮೇಲೆ ನನ್ನ ಸಹಿ ಇದೆ.

*13.* ಉಳಿದ ದ್ರಾವಣದಲ್ಲಿ ನನ್ನ *2* ಕೈ ಬೆರಳುಗಳನ್ನು ತೊಳೆಸಿದರು ಆಗ ಸದರಿ ದ್ರಾವಣ ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿತ್ತು. ಸದರಿ ದ್ರಾವಣವನ್ನು ಒಂದು ಖಾಲಿ ಬಾಟಲಿಗೆ ಹಾಕಿ ಮುಚ್ಚಳ ಮುಚ್ಚಿ ಡಬ್ಲ್ಯೂಡಬ್ಲ್ಯೂ ಅಕ್ಷರದಿಂದ ಸೀಲ್ ಮಾಡಿ ವಶಪಡಿಸಿಕೊಂಡರು. ಸದರಿ ಬಾಟಲಿಯನ್ನು ಈಗಾಗಲೇ ಮು.ಮಾ. *8* ಎಂದು ಗುರುತಿಸಲಾಗಿದೆ. ಸದರಿ ಬಾಟಲಿಯ ಮೇಲೆ ನನ್ನ ಸಹಿ ಇದೆ.

*14.* ತನಿಖಾಧಿಕಾರಿಗಳು, ನನಗೆ ನೀವು ಚಾಸಾ *1* ರಾಮದಾಸ್ ಜೊತೆ ಹೋಗಿ ಆರೋಪಿಯನ್ನು ಭೇಟಿಯಾದಾಗ ಅವರಿಬ್ಬರ ಮಧ್ಯೆ ಸಂಭಾಷಣೆಯನ್ನು ಕೇಳಿಸಿಕೊಂಡು, ಆರೋಪಿ ಬಸವಲಿಂಗಯ್ಯ ಹಣ ಪಡೆದುಕೊಂಡರೆ, ನಾನು ಮತ್ತು ಚಾಸಾ *1* ರಾಮದಾಸ್ ತಲೆ ಸವರಿಕೊಳ್ಳುವ ಮೂಲಕ ಸೂಚನೆ ಕೊಡಬೇಕು ಎಂದು ತಿಳಿಸಿದರು. ಪಂಚ-*2* ಮಂಜುನಾಥ್ ಇವರಿಗೆ ನೀವು ಸಿಬ್ಬಂದಿಯೊಂದಿಗೆ ಇರಬೇಕು, ಚಾಸಾ *1* ಸೂಚನೆ ಕೊಟ್ಟ ಮೇಲೆ ಸ್ಥಳಕ್ಕೆ ನಮ್ಮೊಂದಿಗೆ ಬರಬೇಕು ಎಂದು ಹೇಳಿದರು.

***15.*** ಪ್ರಾಯೋಗಿಕ ಪಂಚನಾಮೆಯ ವೇಳೆಗೆ ಫೋಟೋಗಳನ್ನು ತೆಗೆಸಿದರು. ಸದರಿ ಫೋಟೋಗಳನ್ನು ಸಾಕ್ಷಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ ***3*** ರಿಂದ ***17*** ಎಂದು ಗುರುತಿಸಲಾಗಿದೆ. ಈ ಪ್ರಕ್ರಿಯೆ ಬಗ್ಗೆ ತನಿಖಾಧಿಕಾರಿಗಳು ಪ್ರಾಯೋಗಿಕ ಪಂಚನಾಮೆಯನ್ನು ತಯಾರಿಸಿದರು ಅದಕ್ಕೆ ನಾನು ಸಹಿ ಹಾಕಿರುತ್ತೇನೆ. ಪ್ರಾಯೋಗಿಕ ಪಂಚನಾವೆಯನ್ನು ಈಗಾಗಲೇ ನಿಪಿ ***18*** ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ ***18(***ಸಿ***)*** ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ವಿಶೇಷ ಅಭಿಯೋಜಕರ ವಿನಂತಿಯ ಮೇರಗೆ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತುಃ**

***(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).***

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ನಿಂಗಪ್ಪ ಪರಶುರಾಮ ಕೋಪರ್ಡೆ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**

***16.***

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

***2.***

***3.***

**ಮರುವಿಚಾರಣೆಃ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).***

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ನಿಂಗಪ್ಪ ಪರಶುರಾಮ ಕೋಪರ್ಡೆ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**

***(ಈ ಹಂತದಲ್ಲಿ ಸದರಿ ಸಾಕ್ಷಿಯು ಅಭಿಯೋಜನ ಪಕ್ಷದ ಪ್ರಕರಣಕ್ಕೆ ಅನುಗುಣವಾಗಿ ಸಾಕ್ಷ್ಯ ನುಡಿಯುತ್ತಿಲ್ಲವಾದ ಕಾರಣ ಆತನನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದರ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅಭಿಯೋಜಕರ ಪಾಟೀ ಸವಾಲಿಗೆ ಅನುಮತಿ ನೀಡಲಾಗಿದೆ.)***

**<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ ಃ</u>**